<u>ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ</u>

<u>ಸಿ.ಸಿ. ನಂ. **777/2023** ಸಿ. ಡಬ್ಲ್ಯೂ: **4** ಪಿ ಡಬ್ಲ್ಯೂ ಃ **5**</u>

ಸಾಕ್ಷಿಯ ಹೆಸರು ಃ ಪ್ರಕಾಶಗೌಡ ಪಾಟೀಲ

ತಂದೆಯ ಹೆಸರು ಃ ಬಸನಗೌಡ

ವಯಸ್ಸು ಃ 43 ವರ್ಷ

ಉದ್ಯೋಗ ಃ ಒಕ್ಕಲುತನ.

ವಾಸಸ್ಥಳ ಃ ಶಿರಬಡಗಿ, ತಾಲೂಕಃ ಸವಣೂರ.

ದಿನಾಂಕಃ 12/05/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆಃ ಸಸಅ ರವರಿಂದ</u>

1. ಸಾಕ್ಷಿಗೆ ದಾಖಲೆಗಳಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಈಗಾಗಲೇ ನಿಪಿ. 3 ಮತ್ತು 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3 ಸಿ ಮತ್ತು 4 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಜನವರಿ 2023 ರಲ್ಲಿ ಶಿಗ್ಗಾಂವ್-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ, ಮಾವಿನತೋಪಿನ ಬಳಿ ಸಹಿ ಮಾಡಿದ್ದೇನೆ. ಆಗ ಸಮಯ 01-30 ರಿಂದ 02-00 ಗಂಟೆ ಆಗಿತ್ತು. ಜಾಗವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ನನ್ನೊಂದಿಗೆ ಯಾರೆಲ್ಲ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸ್ಥಳ ಪಂಚನಾಮೆ ಕಾಲಕ್ಕೆ ಪೋಲೀಸರು ನಿಪಿ. 5 ರ ಭಾವ ಚಿತ್ರ ತೆಗೆದಿರುತ್ತಾರೆ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಾಹನಗಳನ್ನು ಜಪ್ತಿ ಮಾಡಿಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

<u>ಪಾಟೀ ಸವಾಲು**:** ಮಾನ್ಯ ಸಸಅ ರವರಿಂದ</u>

2. ದಿಃ 29-01-2023 ರಂದು ಬೆಳಿಗ್ಗೆ 10-30 ರಿಂದ 11-50 ರ ಗಂಟೆಯವರೆಗೆ ಪೋಲೀಸರು ನನ್ನ ಮತ್ತು ಚಾಸಾ 5 ರ ಸಮಕ್ಷಮ ಚಾಸಾ 1 ತೋರಿಸಿದ ಸ್ಥಳವಾದ ಬೆಳ್ಳಿಗಟ್ಟಿ ಗ್ರಾಮದಲ್ಲಿ ನಿಪಿ. 3 ಮತ್ತು 4 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪೋಲೀಸರು ಹುಂಡೈ ಕಾರ ನಂಬರ ಕೆಎಲ್-56-ಡಬ್ಲ್ಯೂ-8177 ಮತ್ತು ಮೋಟಾರ್ ಸೈಕಲ ನಂಬರ ಕೆಎ-27-ಇಬಿ-6107 ನ್ನು ಜಪ್ತಿ ಪಡಿಸಿಕೊಂಡು ನಿಪಿ. 5 ರ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಃ 1ನೇ ಆರೋಪಿ ಪರ ಃ ಶ್ರೀ ಬಿ ವಿ ವೈ ವಕೀಲರಿಂದ ಃ**

3. ಪಂಚರಾಗುವಂತೆ ಪೋಲೀಸರು ನಿಮಗೆ ನೋಟೀಸ ಕೊಟ್ಟಿದ್ದಾರಾ ಎಂದರೆ ಇಲ್ಲ. ಪೋಲೀಸರು ಬರೆದ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ. 3 ಮತ್ತು 4 ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಕಾರ ನಂಬರ ಹಾಗೂ ಮಾಲೀಕರ ಹೆಸರು ಮತ್ತು ಕಾರ ಬಣ್ಣ ಯಾವುದು ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತ ಮೋಟಾರ್ ಸೈಕಲ ಸವಾರನ ತಪ್ಪಿನಿಂದ ಆಗಿದೆ ಎಂದು ಸ್ಥಳದಲ್ಲಿ ನನಗೆ ತಿಳಿದು ಬಂತು ಎಂದರೆ ಸರಿ. ನನ್ನ ಸಮಕ್ಷಮ ಪೋಲೀಸರು ಸ್ಥಳ ಪಂಚನಾಮೆ ಮಾಡಿಲ್ಲ, ವಾಹನಗಳನ್ನು ಜಪ್ತಿ ಪಡಿಸಿಲ್ಲ, ಠಾಣೆಯಲ್ಲಿ ತಯಾರು ಮಾಡಿದ ಪಂಚನಾಮೆಗೆ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.